# ಪಂಚಾಯತರಾಜ್ ವ್ಯವಸ್ಥೆಯಲ್ಲಿ ದಲಿತ ರಾಜಕೀಯ ಪ್ರತಿನಿಧಿಗಳ ಭಾಗವಹಿಸುವಿಕೆ (ಚಿತ್ರದುರ್ಗ ಜಿಲ್ಲೆಯ ಒಂದು ಅಧ್ಯಯನ)

**ಪ್ರವೀಣ್ ಕುಮಾರ್ ಓ.**

ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಮಾ.ಸ.ಬ ಕಲಾ ಮತ್ತು ವಾಣಿಜ್ಯ ಕಾಲೇಜು, ದಾವಣಗೆರೆ.

**DOI: https://doi.org/10.5281/zenodo.18850753**

## ABSTRACT:

ನನ್ನ ಸಂಶೋಧನಾ ಲೇಖನವಾದ "ಪಂಚಾಯತರಾಜ್ ವ್ಯವಸ್ಥೆಯಲ್ಲಿ ದಲಿತ ರಾಜಕೀಯ ಪ್ರತಿನಿಧಿಗಳ ಭಾಗವಹಿಸುವಿಕೆ (ವಿಶೇಷವಾಗಿ ಚಿತ್ರದುರ್ಗ ಜಿಲ್ಲೆಯ ಒಂದು ಅಧ್ಯಯನ)" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ಸಂವಿಧಾನದಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಮೂಲಭೂತ ಹಕ್ಕುಗಳನ್ನು ಅನುಭವಿಸುವ ಅವಕಾಶಗಳನ್ನು ನೀಡಿದ್ದು. ಪ್ರಮುಖವಾಗಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದ ದಲಿತ ಸಮುದಾಯದ ಸಾಮಾಜಿಕ ವರ್ಗಗಳಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಮಹಿಳೆಯರು ಅಲೆಮಾರಿ, ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳು ರಾಜಕೀಯದಿಂದ ದೂರ ಉಳಿದಿವೆ. ಕಾರಣ ರಾಜಕೀಯ ಅರಿವಿನ ಕೊರತೆ, ಆರ್ಥಿಕ ಸಮಸ್ಯೆಗಳು, ಹಾಗೂ ಇತರೆ ಪ್ರಬಲ ಜಾತಿ ಸಮುದಾಯಗಳ ಪಾತ್ರ. ಮತದಾರರು ಮತ್ತು ಪ್ರತಿನಿಧಿಗಳು ರಾಜಕೀಯ ಭಾಗವಹಿಸುವಿಕೆಯಲ್ಲಿ ಹಿಂದುಳಿದಿರುವುದು. ನನ್ನ ಅಧ್ಯಯನದಲ್ಲಿ ಕಂಡುಬಂದಿದೆ ಆದ್ದರಿಂದ ನನ್ನ ಲೇಖನವು ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ದಲಿತ ರಾಜಕೀಯ ಪ್ರತಿನಿಧಿಗಳ ಪಾತ್ರದ ಕುರಿತು ತಿಳಿಸಲಾಗಿದೆ. ಜೊತೆಗೆ ಸಂಶೋಧನಾ ಮೂಲಗಳಾದ ಪ್ರಾಥಮಿಕ ಮತ್ತು ಮಾಧ್ಯಮಿಕ ಮಾಹಿತಿಯ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

## KEYWORDS:

ಪಂಚಾಯತರಾಜ್ ವ್ಯವಸ್ಥೆ, ದಲಿತರು, ಮತದಾರರು ಪಾಲ್ಗೊಳ್ಳುವಿಕೆ, ಜನಪ್ರತಿನಿಧಿಗಳ ಪಾತ್ರ, ರಾಜಕೀಯ ಭಾಗವಹಿಸುವಿಕೆ.

**ಪೀಠಿಕೆ**

ಪ್ರಜಾಪ್ರಭುತ್ವ ಪದ್ಧತಿಯ ಸರ್ಕಾರವನ್ನು ಅತ್ಯುತ್ತಮ ಸರ್ಕಾರ ಪದ್ಧತಿಯೆಂದು ಪರಿಭಾವಿಸಲಾಗಿದೆ.ಈ ಸರ್ಕಾರ ಆಡಳಿತ ಸ್ವಾತಂತ್ರ್ಯ ಸಮಾನತೆ ಸಹೋದರತ್ವ ಮತ್ತು ನ್ಯಾಯ ಎಂಬ ನಾಲ್ಕು ಆಧಾರ ಸ್ತಂಭಗಳ ಮೂಲಕ ನಡೆಸಲಾಗುತ್ತದೆ. ಅಧಿಕಾರ ಮತ್ತು ಅಭಿವೃದ್ಧಿ ಫಲಗಳು ಪ್ರಜಾಸತ್ತಾತ್ಮಕ ರಾಜಕಾರಣದಲ್ಲಿ ಅತಿ ಮುಖ್ಯವಾದದ್ದು ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯಲ್ಲಿ ರಾಜಕೀಯ ಅಧಿಕಾರವನ್ನು ಮತ್ತು ಆಡಳಿತವನ್ನು ಸಾಮಾನ್ಯ ಜನರತ್ತ ಕೊಂಡೊಯ್ಯುವುದು ಮುಖ್ಯ ಮತ್ತು ಅವರನ್ನು ರಾಜಕೀಯ ಪ್ರಕ್ರಿಯೆಯಲ್ಲಿ ಪಾಲ್ಗೊಂಡಾಗ ಮಾತ್ರ ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆ ಅರ್ಥಪೂರ್ಣವಾಗುತ್ತದೆ ಸಾಮಾಜಿಕ ಮತ್ತು ರಾಜಕೀಯವಾಗಿ ಹಿಂದುಳಿದಿರುವ ದಲಿತರು ನೀತಿ ನಿರೂಪಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಾಗ ಮಾತ್ರ ಅಭಿವೃದ್ಧಿ ಪ್ರಜಾಪ್ರಭುತ್ವ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ

ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಸರ್ಕಾರಗಳು ಸ್ವಯಂ ಪರಿಪೂರ್ಣವಾಗಿ ಕೆಲಸ ಮಾಡುತ್ತಿರುವಂತೆ ಸ್ಥಳೀಯ ಹಂತದಲ್ಲಿ ಗ್ರಾಮಗಳು ಸ್ವಯಂ ಪರಿಪೂರ್ಣ ಸರ್ಕಾರಗಳಾಗಿ ಕೆಲಸ ಮಾಡುವಂತಾಗಬೇಕು ಈ ಹಿನ್ನೆಲೆಯಲ್ಲಿ 73 ನೇ ಸಂವಿಧಾನ ತಿದ್ದುಪಡಿಯು ಹೆಚ್ಚು ಮಹತ್ವದಾಗಿದ್ದು ರಾಷ್ಟ್ರಾದ್ಯಂತ ಗ್ರಾಮಪಂಚಾಯಿತಿಗಳ ಸ್ಥಾಪನೆಗೆ ಅವಕಾಶ ಕಲ್ಪಿಸಿದೆ ಆ ಮೂಲಕ ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಪಂಚಾಯತ ರಾಜ ಸಂಸ್ಥೆಗಳ ಮಹತ್ವವನ್ನು ಹೆಚ್ಚಿಸಿದೆ

ಪಂಚಾಯತರಾಜ್ ವ್ಯವಸ್ಥೆ

ಭಾರತದಲ್ಲಿ ಗ್ರಾಮೀಣ ಸ್ಥಳೀಯ ಸರ್ಕಾರವನ್ನು ಪಂಚಾಯತ್ ರಾಜ್ ಎಂಬ ಹೆಸರಿನಿಂದ ಕರೆಯಲಾಗುತ್ತದೆ.ಸ್ಥಳೀಯ ಸರ್ಕಾರಗಳು ಎಂಬ ವಿಷಯ ರಾಜ್ಯಪಟ್ಟಿಯಲ್ಲಿ ಇರುವುದರಿಂದ ಭಾರತದಲ್ಲಿ ಎಲ್ಲ ರಾಜ್ಯಗಳು ತಮ್ಮ ಶಾಸನಸಭೆಗಳ ಅಧಿನಿಯಮಗಳ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳನ್ನು ರಚಿಸಿಕೊಂಡಿವೆ. ಅಂದರೆ ಪಂಚಾಯತ್ ರಾಜ್ ವ್ಯವಸ್ಥೆಗೆ ಸಂಬಂಧಿಸಿದಂತೆ ಶಾಸನಗಳನ್ನು ರಚಿಸುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇದೆ ಎಂದರ್ಥ.73 ನೇ ತಿದ್ದುಪಡಿ ಕಾಯ್ದೆ ಜಾರಿಗೆ ಬರುವುದಕ್ಕಿಂತ ಮುಂಚಿತವಾಗಿ ರಾಜ್ಯ ನಿರ್ದೇಶಕ ತತ್ವಗಳಲ್ಲಿ ಕಂಡುಬರುವ 40 ನೇ ವಿಧಿಯಲ್ಲಿ ಮಾತ್ರ ಪಂಚಾಯತ್ ಗಳ ಬಗೆಗಿನ ಪ್ರಸ್ತಾಪ ಕಂಡುಬರುತ್ತದೆ. 1992 ರ 73 ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಮೂಲಕ ಪಂಚಾಯತ್ ರಾಜ್ಯ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನವನ್ನು ನೀಡಲಾಯಿತು

ಪಂಚಾಯತರಾಜ ಸಂಸ್ಥೆಗಳ ಯಶಸ್ಸು ಪಂಚಾಯತರಾಜ ಸಂಸ್ಥೆಗಳಿಗೆ ಆಯ್ಕೆಗೊಳ್ಳುವ ಚುನಾಯಿತ ಜನಪ್ರತಿನಿಧಿಗಳ ಚರಿತ್ರೆ ಅಧಿಕಾರ ಕಾರ್ಯದಕ್ಷತೆ ಉತ್ತಮ ಅಭಿವೃದ್ಧಿ ಯೋಜನೆಗಳು ಪಂಚಾಯತರಾಜ್ ಆದಾಯಮೂಲಗಳು ಮತ್ತು ಸಾಮಾನ್ಯ ಜನರ ಅರಿವು ಜ್ಞಾನದ ಮೇಲೆ ನಿಂತಿದೆ ಎಲ್ಲಿ ಜನರು ತಮ್ಮ ಹಕ್ಕು ಬಾಧ್ಯತೆಗಳು ಹಾಗೂ ಸ್ವಾತಂತ್ರ್ಯದ ಬಗ್ಗೆ ಜಾಗೃತವಾಗಿ ಪ್ರಜ್ಞೆಯನ್ನು ಹೊಂದಿರುತ್ತಾರೆಯೇ ಅಂತಹ ರಾಷ್ಟ್ರದಲ್ಲಿರುವ ಸಂವಿಧಾನ ಎಷ್ಟು ನ್ಯೂನತೆಗಳಿಂದ ಅಥವಾ ದೋಷಗಳಿಂದ ಕೂಡಿದರೂ ಆ ಸಂವಿಧಾನ ದಕ್ಷಯುತವಾಗಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬಲ್ಲದು ರಾಷ್ಟ್ರ ಎಷ್ಟು ಉತ್ತಮ ಸಂವಿಧಾನವನ್ನು ಹೊಂದಿದ್ದರೂ ಕೂಡ ಅಲ್ಲಿನ ಜನತೆಯಲ್ಲಿ ಅವರ ಹಕ್ಕು ಬಾಧ್ಯತೆಗಳು ಹಾಗೂ ಸ್ವಾತಂತ್ರ್ಯದ ಬಗ್ಗೆ ಸೂಕ್ತ ಜಾಗೃತಿ ಅರಿವು ಜ್ಞಾನ ತಿಳುವಳಿಕೆ ಹೊಂದಿಲ್ಲದಿದ್ದರೆ ಆ ಸಂವಿಧಾನ ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ

ಯಶಸ್ವಿಯಾಗುವುದಿಲ್ಲ ಆದ್ದರಿಂದ ಆ ಸಂಸ್ಥೆಗಳಿಗೆ ಜನರ ಒಡೆಯರಾಗಿ ಕೆಲಸ ಮಾಡುವವರಿಗಿಂತ ಜನರ ಸೇವಕರಾಗಿ ಕೆಲಸ ಮಾಡುವ ಚಾರಿತ್ರ್ಯ ಪ್ರಾಮಾಣಿಕ ಒಳ್ಳೆಯ ನಡೆತೆಯ ಜನರನ್ನು ಅಧಿಕಾರಕ್ಕೆ ತರಲು ಸಹಾಯಕವಾಗುವ ಸೂಕ್ತ ರಕ್ಷಣೋಪಾಯ ವಿಧಾನಗಳನ್ನು ಹೊಂದುವ ಅವಶ್ಯಕತೆ ಇದೆ

**ದಲಿತರು**

ದಲಿತ ಎಂದರೆ ಹಿಂಸೆಗೆ ಒಳಗಾದ ದಲಿತತ್ವಕ್ಕೆ ಒಳಗಾದ ಶೋಷಣೆಗೆ ಒಳಗಾದ ಎಂಬುದರಿಂದ ಹಿಡಿದು ಅಂದೊಂದು ಜೀತ ಪದ್ಧತಿಯೆನ್ನುವವರೆಗೆ ಅದರ ಅರ್ಥಗಳನ್ನು ವಿಸ್ತರಿಸಲಾಗಿದೆ. ದಲ ಎಂಬ ಸಂಸ್ಕೃತ ಶಬ್ದದಿಂದ ಬಂದಿದ್ದು ದಲಿತ ದಲದ ದಲನಕ್ಕೆ ಒಳಗಾದವರು ದಲಿತರು ದಲ ಎಂದರೆ ಚೂರು ತುಂಡುಭಾಗ ಛಿದ್ರವಾದವರು ದಲನ ಕ್ರಿಯೆಗೆ ಒಳಗಾದವರು ಯಾರೂ ಶೋಷಿತರೊ ಅವರೇ ದಲಿತರು

ಕರ್ನಾಟಕದಲ್ಲಿ ದಲಿತ ಪದವನ್ನು ಚಲಾವಣೆಗೆ ತಂದವರು ದಲಿತ ಸಂಘಟನೆ ಎಂದರೆ ದಲಿತ ಕ್ರಿಯಾ ಸಮಿತಿ ಎಂದರ್ಥ ನೀಡುತ್ತದೆ. ದಲಿತ ಪದ ಕನ್ನಡಕ್ಕೆ ಮರಾಠಿ ದಲಿತ ಸಾಹಿತಿಗಳಿಂದ ಬಂದದ್ದು ದಲಿತ ಪ್ಯಾಂಥರ್ಸ್ ಸಂಘಟನೆಯನ್ನು ಪ್ರಾರಂಭಿಸುವ ಮೂಲಕ ದಲಿತ ಪದವನ್ನು ಬಳಕೆಗೆ ತಂದರು ಡಾ॥ ಅಂಬೇಡ್ಕರ್ ಈ ಶಬ್ದವನ್ನು ಪರಿಶಿಷ್ಟ ಜಾತಿ ಸಮುದಾಯವನ್ನು ಸ್ಪಷ್ಟವಾಗಿ ಗುರುತಿಸುವ ನಿಟ್ಟಿನಲ್ಲಿ ದಲಿತ ಶಬ್ದವನ್ನು ಮೊದಲಿಗೆ ಹುಟ್ಟು ಹಾಕಿದರು ಅನಂತರ ಇದು ಅಂಗೀಕರಿಸಲು ವ್ಯಾಪಕವಾಗಿ ಬಳಕೆಗೆ ಬಂದಿತು

**ಸಂಶೋಧನಾ ಉದ್ದೇಶ**

ಸಂಶೋಧನಾ ಉದ್ದೇಶ ಪಂಚಾಯತ ರಾಜಸಂಸ್ಥೆಗಳಲ್ಲಿ ದಲಿತ ನಾಯಕರ ರಾಜಕೀಯ ಭಾಗವಹಿಸುವಿಕೆ ಕುರಿತು ಅಧ್ಯಯನ ಮಾಡುವುದು ಈ ಅಧ್ಯಯನ ಮೂಲಕ ಪಂಚಾಯತರಾಜ್ ಸಂಸ್ಥೆಗಳು ತಮ್ಮ ಅಧಿಕಾರ ಮತ್ತು ಕಾರ್ಯಗಳನ್ನು ನಿರ್ವಹಿಸುವಲ್ಲಿ ಎಷ್ಟರಮಟ್ಟಿಗೆ ಯಶಸ್ಸನ್ನು ಹೊಂದಿದೆ ಎಷ್ಟರಮಟ್ಟಿಗೆ ಯಶಸ್ಸುಹೊಂದಿಲ್ಲ ಎಂಬುವುದನ್ನು ಕಂಡು ಕೊಳ್ಳಲು ಸಂಶೋಧನೆ ಧ್ಯೇಯೋದ್ದೇಶವಾಗಿದೆ

1. ಪಂಚಾಯತ ರಾಜ್ ಸಂಸ್ಥೆಗಳ ಕಾರ್ಯನಿರ್ವಹಣೆಯ ಬಗ್ಗೆ ಜನಸಾಮಾನ್ಯರಲ್ಲಿ ಜಾಗೃತಿ ಪ್ರಜ್ಞೆ
2. ಪಂಚಾಯತರಾಜ್ ಸಂಸ್ಥೆಗಳ ಪ್ರತಿನಿಧಿಗಳಲ್ಲಿ ಕಂಡುಬರುವ ನಾಯಕತ್ವದ ಗುಣಲಕ್ಷಣಗಳು
3. ಪಂಚಾಯತ್ ರಾಜ ವ್ಯವಸ್ಥೆಯ ಕಾರ್ಯನಿರ್ವಹಣೆ ಬೆಳೆದು ಬಂದ ಬಗೆಯನ್ನು ಗುರುತಿಸುವುದು

ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆ ಐತಿಹಾಸಿಕ ಪುಟಗಳಲ್ಲಿ ತನ್ನದೆ ಆದ ವಿಶಿಷ್ಟ ಸ್ಥಾನವನ್ನು ಪಡೆದಿದೆ ಇಲ್ಲಿನ ಮದಕರಿನಾಯಕನ ಕೋಟೆ ಕರ್ನಾಟಕದ ಅಮೂಲ್ಯ ಸ್ಮಾರಕವಾಗಿದೆ ಪ್ರಕೃತಿದತ್ತವಾದ ಬೆಟ್ಟಗಳನ್ನು ಬಳಸಿಕೊಂಡು ರಕ್ಷಣೆಗಾಗಿ ಕಟ್ಟಿಕೊಂಡ ಈ ಚಿತ್ರದುರ್ಗದ ಕೋಟೆ ದೇಶ ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುತ್ತದೆ. ರಾಜ್ಯದ ಐತಿಹಾಸಿಕ ಪುಟಗಳಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಚಿತ್ರದುರ್ಗ ಜಿಲ್ಲೆ 6 ತಾಲ್ಲೂಕುಗಳನ್ನು 22 ಹೋಬಳಿ 922 ಜನವಸತಿ ಇರುವ ಗ್ರಾಮಗಳನ್ನು 185 ಗ್ರಾಮಪಂಚಾಯಿತಿಗಳನ್ನು 2 ಪುರಸಭೆ 3 ಪಟ್ಟಣ ಪಂಚಾಯಿತಿ 1 ನಗರ ಸಭೆ 6

ತಾಲ್ಲೂಕುಪಂಚಾಯತ 6 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ ಭೌಗೋಳಿಕವಾಗಿ 836981 ಚ.ಕಿ.ಮಿ ವಿಸ್ತೀರ್ಣಹೊಂದಿದೆ. ಒಟ್ಟು 2180333 ಜನಸಂಖ್ಯೆ ಹೊಂದಿರುವ ಈ ಜಿಲ್ಲೆ 52.57 ರಷ್ಟು ಸಾಕ್ಷರತೆ ಹೊಂದಿದೆ ಆದರೆ ಪರಿಶಿಷ್ಟ ಜನರ ಸಾಕ್ಷರತೆ ಶೇ 36.19ರಷ್ಟಿದೆ. ಚಿತ್ರದುರ್ಗ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮತದಾರರ ಮತ್ತು ಜನಪ್ರತಿನಿಧಿಗಳ ಸಾಮಾಜಿಕ ಆರ್ಥಿಕವಾಗಿ ರಾಜಕೀಯವಾಗಿ ಪರಿಚಯಿಸುವ ಉದ್ದೇಶದಿಂದ ಚಿತ್ರದುರ್ಗ ಜಿಲ್ಲೆಯನ್ನು ಆಯ್ಕೆಮಾಡಿಕೊಳ್ಳಲಾಗಿದೆ

**ಚಿತ್ರದುರ್ಗ**

| ಕ್ಷೇತ್ರಗಳು | ಗ್ರಾಮಗಳು | ಹೋಬಳಿಗಳು | ಗ್ರಾಮಪಂ | ತಾ.ಪಂ ಕ್ಷೇತ್ರಗಳು | ಜಿ.ಪಂ ಕ್ಷೇತ್ರಗಳು | ಮೀಸಲು ಕ್ಷೇತ್ರಗಳು |
|---|---|---|---|---|---|---|
| ಚಳ್ಳಕೆರೆ | 195 | 4 | 40 | 30 | 8 | ಪ.ಪಂಗಡ (ವಿಧಾನಸಭಾ2008–) |
| ಮೊಳಕಾಲ್ಮೂರು | 89 | 2 | 16 | 13 | 4 | ಪ.ಪಂಗಡ (ವಿಧಾನಸಭಾ2008–) |
| ಹೊಳಲ್ಕೆರೆ | 202 | 4 | 29 | 20 | 5 | |
| ಚಿತ್ರದುರ್ಗ | 195 | 4 | 38 | 29 | 8 | ಪ.ಜಾತಿ (ಲೋಕಸಭಾ2008–) |
| ಹಿರಿಯೂರು | 158 | 4 | 33 | 23 | 6 | ಪ.ಜಾತಿ (1962–2004) |
| ಹೊಸದುರ್ಗ | 225 | 4 | 33 | 21 | 6 | |

| ಕ್ಷೇತ್ರಗಳು | ಜನಸಂಖ್ಯೆ | ಪ.ಜಾತಿ | ಪ.ಪಂಗಡ | ಪ.ಜಾತಿ.ಮತ್ತು ಪ.ಪಂಗಡ |
|---|---|---|---|---|
| ಚಳ್ಳಕೆರೆ | 3,65,784 | 82,899 | 1,07,640 | 1,90,539 |
| ಮೊಳಕಾಲ್ಮೂರು | 14,1,284 | 27,951 | 52,908 | 80,859 |
| ಹೊಳಲ್ಕೆರೆ | 2,07,263 | 56,733 | 25,395 | 82,128 |
| ಹಿರಿಯೂರು | 2,86,133 | 71,730 | 28,028 | 99,758 |
| ಚಿತ್ರದುರ್ಗ | 4,23,879 | 1,01,532 | 69,629 | 1,71,161 |
| ಹೊಸದುರ್ಗ | 2,35,116 | 48,272 | 18,954 | 67,226 |

**ಮತದಾರರು ಪಾಲ್ಗೊಳ್ಳುವಿಕೆ**

ಪಂಚಾಯತ್ ರಾಜ ಸಂಸ್ಥೆಗಳು ಜನರಿಗೆ ಚುನಾಯಿತ ಜನಪ್ರತಿನಿಧಿಗಳಿಗೆ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ನೇರವಾಗಿ ಪಾಲ್ಗೊಳ್ಳುವಂತೆ ಅವಕಾಶ ನೀಡಿ ಅವರೇ ಯೋಜನೆಗಳನ್ನು ರಚಿಸಿ ಮತ್ತು ಅವುಗಳನ್ನು ಜಾರಿಗೊಳಿಸಿಕೊಂಡು ತಮ್ಮ ಗ್ರಾಮದಲ್ಲಿರುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಉತ್ತಮ ವೇದಿಕೆಗಳನ್ನು ಒದಗಿಸಿಕೊಟ್ಟಿವೆ. ಅಭಿವೃದ್ಧಿ ಯೋಜನೆಗಳ ರಚನೆಯಿಂದ ಅವುಗಳನ್ನು ಕಾರ್ಯಗತಗೊಳಿಸುವ ಹಂತದವರೆಗಿನ ಜವಾಬ್ದಾರಿ ಪಂಚಾಯತರಾಜ್ ಸಂಸ್ಥೆಗಳಿಗೆ ಸೇರಿರುವುದರಿಂದ ಅಭಿವೃದ್ಧಿ ಯೋಜನೆಗಳ ಕಾರ್ಯಗತಗೊಳಿಸುವಿಕೆಯಲ್ಲಿ ವಿಳಂಬ ತಪ್ಪುತ್ತದೆಯಲ್ಲದೆ ನಿಜವಾದ ಫಲಾನುಭವಿಗಳಿಗೆ ನೇರವಾಗಿ ಸೌಲಭ್ಯಗಳು ದೊರಕಲು ಸಾಧ್ಯವಾಗುತ್ತದೆ. ಪಂಚಾಯತ ರಾಜಸಂಸ್ಥೆಗಳಿಗೆ ಹೆಚ್ಚು ಜವಾಬ್ದಾರಿ ಅಧಿಕಾರಗಳನ್ನು ಇನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡಿದ ಪಕ್ಷದಲ್ಲಿ ಗಾಂಧೀಜಿಯವರ

ಕಂಡ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸಬಹುದು ಆದರೆ ಪಂಚಾಯತರಾಜ ಸಂಸ್ಥೆಗಳಲ್ಲಿನ ಭಾಗವಹಿಸುವಿಕೆ ಕೊರತೆ ಸ್ಥಳೀಯ ನಾಯಕರ ಪ್ರಭಾವ ಅಧಿಕಾರಗಳು ಮತ್ತು ಚುನಾಯಿತ ಪ್ರತಿನಿಧಿಗಳ ನಡುವಿನ ಹೊಂದಾಣಿಕೆಯ ಕೊರತೆ ಹಣಕಾಸಿನ ಕೊರತೆ ಚುನಾವಣಾ ಪ್ರತಿನಿಧಿಗಳ ಆಡಳಿತ ತರಬೇತಿ ಕೊರತೆ ಇನ್ನು ಮೊದಲಾದ ಸಮಸ್ಯೆಗಳಿಂದ ಪಂಚಾಯತರಾಜ್ ಸಂಸ್ಥೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುವಲ್ಲಿ ಸಾಧ್ಯವಾಗುತ್ತಿಲ್ಲ.

ಮಹಾತ್ಮಗಾಂಧೀಜಿಯವರು– "ನನ್ನ ಸ್ವರಾಜ್ಯದ ಕಲ್ಪನೆ ಕೆಲವರಲ್ಲಿಯೇ ಅಧಿಕಾರವನ್ನು ಕೇಂದ್ರಿಕರಿಸುವುದಲ್ಲ ಆದರೆ ಅಧಿಕಾರವನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಬಹುಜನರು ಹೊಂದುವುದಾಗಿದೆ. ಹಳ್ಳಿಗರ ರಕ್ತದ ಸಿಮೆಂಟಿನಿಂದ ನಗರಗಳೆಂಬ ಭವನ ನಿರ್ಮಾಣವಾಗಿದೆ. ಇಂದು ನಗರಗಳ ಅಪಧಮನಿಗಳಲ್ಲಿ ತುಂಬಿರುವ ರಕ್ತ ಇನ್ನೊಮ್ಮೆ ಹಳ್ಳಿಗಳ ರಕ್ತನಾಳಗಳಲ್ಲಿ ಹರಿದಾಡಲಿ ಎಂದು ಬಯಸುತ್ತೇವೆ ಎಂದು ಹೇಳಿದ್ದಾರೆ.

**ಜನಪ್ರತಿನಿಧಿಗಳ ಪಾತ್ರ**

ಪಂಚಾಯತ್ ರಾಜಸಂಸ್ಥೆಗಳ ಯಶಸ್ಸು ಪಂಚಾಯತರಾಜ ಸಂಸ್ಥೆಗಳಿಗೆ ಆಯ್ಕೆಗೊಳ್ಳುವ ಚುನಾಯಿತ ಜನಪ್ರತಿನಿಧಿಗಳ ಚಾರಿತ್ರ್ಯವನ್ನು ಮತ್ತು ಅಧಿಕಾರಿಗಳ ಕಾರ್ಯ ದಕ್ಷತೆಯನ್ನು ಅವಲಂಬಿಸಿದೆ ಏಕೆಂದರೆ ಗ್ರಾಮೀಣ ಅಭಿವೃದ್ಧಿಗೆ ಬಹಳ ಅಗತ್ಯವಾಗಿರುವುದು ಉತ್ತಮ ಗ್ರಾಮೀಣ ನಾಯಕತ್ವ ವಾಸ್ತವಿಕವಾಗಿ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಲ್ಲಿ ವಿಳಂಬ ಉಂಟಾಗಲು ಕಾರಣ ಹಣ ಮತ್ತು ವಿಶೇಷ ಕಾರ್ಯಕ್ರಮಗಳಿಗಿಂತ ಹೆಚ್ಚಾಗಿ ಸರಿಯಾದ ನಾಯಕತ್ವದ ಸಂಪೂರ್ಣ ಅಲಭ್ಯತೆ ಉತ್ತಮ ನಾಯಕತ್ವ ಲಕ್ಷಣಗಳು ಗ್ರಾಮೀಣ ನಾಯಕರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಣಲು ಸಾಧ್ಯವಾಗುತ್ತಿಲ್ಲ ಅವರಿಗೆ ಅಭಿವೃದ್ಧಿಯ ಬಗ್ಗೆ ಪಂಚಾಯತರಾಜ ವ್ಯವಸ್ಥೆಯ ಅಧಿಕಾರ ಕಾರ್ಯಗಳ ಬಗ್ಗೆ ತಮ್ಮ ಜವಾಬ್ದಾರಿಗಳ ಬಗ್ಗೆ ಅರಿವು ಇರಬೇಕಾಗಿದೆ ಈ ಅರಿವು ಅವರಲ್ಲಿ ತುಂಬಾ ಕಡಿಮೆ ಇದೆ ಎಂದು ಹೇಳಬಹುದು ಇದರ ಜೊತೆಗೆ ಸರಿಯಾದ ನಾಯಕತ್ವ ಮೂಡಿಬರುತ್ತಿಲ್ಲ ಭಾರತದ ಸಾಂಪ್ರದಾಯಿಕ ವ್ಯವಸ್ಥೆಯಲ್ಲಿನ ಕಂದಾಚಾರಗಳು ಮತ್ತು ಮಹಿಳೆಯರ ಕೌಟುಂಬಿಕ ಸಮಸ್ಯೆಗಳು ಅನಕ್ಷರತೆ ಅವರನ್ನು ಅಭಿವೃದ್ಧಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸುವಂತೆ ಅಡ್ಡಿಯಾಗಿದೆ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಮೀಸಲಾತಿ ನೀಡಿರುವುದು ಅಸಮರ್ಥ ನಾಯಕರ ಆಯ್ಕೆಗೆ ಪರೋಕ್ಷವಾಗಿ ಕಾರಣವಾಗಿದೆ ಎನ್ನಬಹುದು ಇವೆಲ್ಲ ಅಂಶಗಳಿಗೆ ಸಮರ್ಥ ಕಾರಣಗಳು ಮತ್ತು ಪರಿಹಾರಗಳನ್ನು ಕಂಡುಕೊಳ್ಳಲು ಚಿತ್ರದುರ್ಗ ಜಿಲ್ಲೆಯನ್ನು ಸಂಶೋಧನೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ.

**ಉಪಸಂಹಾರ**

ಜಗತ್ತಿನಲ್ಲೆ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತವು ಹಲವಾರು ಜಾತಿಯ ,ಧರ್ಮದ ಭಾಷೆಯ ಜನರನ್ನು ಒಳಗೊಂಡಿರುವುದನ್ನು ಕಾಣಬಹುದಾಗಿದ್ದು.ಇಲ್ಲಿನ ರಾಜಕೀಯ ವ್ಯವಸ್ಥೆಯನ್ನು ಗಮನಿಸಿದಾಗ ಪ್ರಬಲಜಾತಿಗಳ ಹಿಡಿತದ ರಾಜಕಾರಣ ಆಳವಾಗಿ ಬೇರೂರಿರುವುದು ಗೋಚರವಾಗುತ್ತದೆ. ಶತಮಾನಗಳಿಂದ ಶೋಷಣೆಗೆ ಒಳಗಾದ ದಲಿತರು ರಾಜಕೀಯ ಪ್ರವೇಶಿಸುವುದು ಮತ್ತು ರಾಜಕಾರಣದಲ್ಲಿ ಸಕ್ರಿಯ ಪಾತ್ರವಹಿಸುವುದು ಸುಲಭವಾದ ಕೆಲಸವಾಗಿರಲಿಲ್ಲ.ಇಂತಹ ಸಂದಿಗ್ಧ ಸಂದರ್ಭದಲ್ಲೂ ದಲಿತ ನಾಯಕತ್ವ ಮತ್ತು ಚಳುವಳಿ ಕಾಣಬಹುದು.1894ರ ನಂತರ ಮೈಸೂರು ಚಾಮರಾಜ ಒಡೆಯರು ಕೆಳವರ್ಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅವಕಾಶ ದೊರಕಿಸಿ ಉದಾರ ನೀತಿಯನ್ನು

ಅನುಸರಿಸಿದರು ಸಾಮಾಜಿಕ ಅನಿಷ್ಟತೆ ತೊಲಗಿಸುವ ಪ್ರಯತ್ನದೊಂದಿಗೆ ಪಂಚಮಶಾಲೆಗಳನ್ನು ತೆರೆದರು.ನಾಲ್ವಡಿ ಕೃಷ್ಣರಾಜ ಒಡೆಯರು ದಲಿತರಿಗೆ ಮೀಸಲಾತಿಯನ್ನು ಕಲ್ಪಿಸುವುದರ ಮುಖಾಂತರ ಹೆಚ್ಚಿನ ಸುಧಾರಣೆಯನ್ನು ಮಾಡಿದರು. ಒಟ್ಟಾರೆಯಾಗಿ ಹೇಳುವುದಾದರೆ ದಲಿತ ಪ್ರತಿನಿಧಿಗಳು ಸಕ್ರಿಯವಾಗಿ ಮತ್ತು ದಲಿತರ ಅಭಿವೃದ್ಧಿಗಾಗಿ ಶ್ರಮಿಸಬೇಕಾಗುತ್ತದೆ. ಮೊದಲು ದಲಿತರು ಶಿಕ್ಷಣವಂತರಾಗಬೇಕು ಆಗ ಮಾತ್ರ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಅಂಬೇಡ್ಕರ್ ಸಮಾಜ ಸುಧಾರಕರಾಗಿ ದೀನ-ದಲಿತ-ಹಿಂದುಳಿದ ಹಾಗೂ ತುಳಿತಕ್ಕೊಳಗಾದ ಜನಾಂಗಗಳ ಚೈತನ್ಯದ ಚಿಲುಮೆಯಾಗಿ, ಮೇಲ್ವರ್ಗದ ಜಾತಿಯ ರಾಜಕಾರಣದ ನಡುವೆಯೂ ಶೋಷಿತರ ಧ್ವನಿಯಾಗಿ ರಾಜಕೀಯದಲ್ಲಿ ಹೊರ ಹೊಮ್ಮಿದರು ತಮ್ಮ ಇಡೀ ರಾಜಕೀಯ ಜೀವನದಲ್ಲಿ ದಲಿತರಿಗೆ ಆತ್ಮವಿಶ್ವಾಸವನ್ನು ಮೂಡಿಸಿದರು.

**ಪರಾಮರ್ಶನ ಗ್ರಂಥಗಳು:**


1. ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ ಬೆಂಗಳೂರು.
2. ಪಿ.ಎಸ್ ಗಂಗಾಧರ ಭಾರತ ಸಂವಿಧಾನ ಮತ್ತು ರಾಜಕೀಯ ಚೈತ್ರಪ್ರಕಾಶನ ಬೆಂಗಳೂರು2014
3. ಅರವಿಂದ ಮಾಲಗತ್ತಿ ಅಂತರಜಾತಿ ವಿವಾಹ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 1997
4. ಅರ್ಜುನ ಗೊಳಸಂಗಿ(ಸಂ) ಕನ್ನಡ ದಲಿತ ಸಾಹಿತ್ಯ ಸಮಾಲೋಕನ, ಕರ್ನಾಟಕ ಸಾಹಿತ್ಯ ಅಕಾಡಮಿ ಬೆಂಗಳೂರು,2003
5. ನಾಗರಾಜು ಸಂಸದೀಯ ಪಟು ಬಿ.ಬಸವಲಿಂಗಪ್ಪ ಸಿಂಚು ಮಲ್ಟಿಗ್ರಾಫ್ ಮೈಸೂರು2011
6. Ramesh Chandra. Dalits and the Ideology of Revolt, Common Wealth Publishers, New Delhi, 2003
7. Susan Bayly. Caste, Society and Politics in India, Cambridge University Press, 2002
8. Rajni Kothari. Caste in Indian Politics, W.H. Patwardhan, New Delhi 1970



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.